# 1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ

**ಎಸ್.ಸಿ.** 5013/2026

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ದೊಡ್ಡಮಾದಶೆಟ್ಟಿ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ಲೇಟ್ ದೊಡ್ಡಮಾದಶೆಟ್ಟಿ | 10.07.2026 |
| **ವಯಸ್ಸು** | : | 47 ವರ್ಷ | |
| **ವೃತ್ತಿ** | : | ವ್ಯವಸಾಯ | **ಪ್ರಾ.ಸಾಃ** 2 |
| **ವಾಸ ಸ್ಥಳ** | : | ಕುಣಗಳ್ಳಿ | **ಚಾ.ಸಾಃ** 3 |

## ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

ನನಗೆ ಚಾಸಾ 1 ಮತ್ತು 2 ಗೊತ್ತು. ಚಾಸಾ 4 ರಿಂದ 08 ಗೊತ್ತು. ಅವರು ನಮ್ಮ ಗ್ರಾಮದ ಮುಖಂಡರು. ಚಾಸಾ 9 ರಿಂದ 11 ರವರು ದಾಸನದೊಡ್ಡಿ ಗ್ರಾಮದವರು. ಮೃತ ಉದಯಕುಮಾರ್ ಗೊತ್ತು. ನನಗೆ ಆರೋಪಿತರು ಗೊತ್ತು. ಸುಮಾರು 7 ವರ್ಷದ ಹಿಂದೆ ಮೃತ ಉದಯಕುಮಾರ್ ಮತ್ತು 1 ನೇ ಆರೋಪಿಯ ವಿವಾಹವಾಗಿರುತ್ತದೆ. ವಿವಾಹವಾದ ನಂತರ ಅವರಿಬ್ಬರೂ ಕುಣಗಳ್ಳಿ ಗ್ರಾಮದಲ್ಲಿ ವಾಸವಿದ್ದರು. ಅವರು ಒಂದು ವರ್ಷದ ವರೆಗೆ ಅನ್ಯೋನ್ಯವಾಗಿದ್ದರು. ಅವರಿಗೆ ಒಂದು ಹೆಣ್ಣು ಮಗು ಜನಿಸಿರುತ್ತದೆ. ಆ ನಂತರ 1 ಮತ್ತು 4 ನೇ ಆರೋಪಿತರ ನಡುವೆ ಅಕ್ರಮ ಸಂಬಂಧ ಇದ್ದ ಕಾರಣ ಮೃತ ಉದಯಕುಮಾರ್ ಮತ್ತು 1 ನೇ ಆರೋಪಿ ನಡುವೆ ಗಲಾಟೆಯಾಯಿತು. 1 ನೇ ಆರೋಪಿಯು ಆಕೆಯ ತಂದೆ ತಾಯಿ ಮನೆಗೆ ಹೊರಟು ಹೋದಳು. ಮೃತ ಉದಯಕುಮಾರ್ ಈ ವಿಚಾರವನ್ನು ನನಗೆ ತಿಳಿಸಿ ನ್ಯಾಯ ಪಂಚಾಯಿತಿ ಮಾಡುವಂತೆ ಕೇಳಿಕೊಂಡನು. ದಾಸನದೊಡ್ಡಿ ಗ್ರಾಮದಲ್ಲಿ 2

ಮತ್ತು 3 ನೇ ಆರೋಪಿತರನ್ನು ಕರೆಸಿ 1 ನೇ ಆರೋಪಿಗೆ ಬುದ್ದಿ ಹೇಳುವಂತೆ ಪಂಚಾಯಿತಿ ಮಾಡಿದೆವು. 2 ಮತ್ತು 3 ನೇ ಆರೋಪಿತರು 1 ನೇ ಆರೋಪಿಯ ಕೃತ್ಯವನ್ನು ಸಮರ್ಥಿಸಿ ನೀನು ವೆಸ್ಟ ಬಾಡಿ ಹೋಗಿ ನೇಣು ಹಾಕಿಕೋ ಎಂದು ಹೇಳಿದರು. ಒಂದು ಮೂರು ಬಾರಿ ನ್ಯಾಯ ಪಂಚಾಯಿತಿ ಮಾಡಿರುತ್ತೇವೆ. ನ್ಯಾಯ ಪಂಚಾಯಿತಿ ಮಾಡಿದರೂ 1 ನೇ ಆರೋಪಿ ಮತ್ತು ಮೃತ ಉದಯಕುಮಾರ್ ಜೊತೆಯಲ್ಲಿ ಇರಲಿಲ್ಲ. ಮೃತ ಉದಯಕುಮಾರ್ ತಾನು ಮೃತಪಡುವುದಕ್ಕೆ 1 ತಿಂಗಳ ಹಿಂದೆ 4 ನೇ ಆರೋಪಿಯು 1 ನೇ ಆರೋಪಿಯ ಮನೆಯಲ್ಲಿ ಇದ್ದಾನೆ ಎಂದು ವಿಷಯ ತಿಳಿದು ನಮಗೆ ದೂರವಾಣಿ ಮೂಲಕ ಈ ವಿಚಾರ ತಿಳಿಸಿದನು. ನಾನು ಮತ್ತು ಇತರ ಮುಖಂಡರು ದಾಸನದೊಡ್ಡಿ ಗ್ರಾಮಕ್ಕೆ ಹೋದೆವು. ನಾವು ಹೋದಾಗ ಮೃತ ಉದಯಕುಮಾರಿಗೆ ಹಲ್ಲೆ ಮಾಡಿದ್ದರು. 1ರಿಂದ 3 ನೇ ಆರೋಪಿತರು ರಾಮಾಪುರ ಪೊ.ಠಾಣೆಗೆ ದೂರು ಕೊಟ್ಟರು. ಪೋಲೀಸರು ಠಾಣೆಯಲ್ಲಿ ವಿಚಾರಣೆ ಮಾಡಿದರು. ಪೋಲೀಸರು 1 ಮತ್ತು 4 ನೇ ಆರೋಪಿಗೆ ಅಕ್ರಮ ಸಂಬಂಧ ಇಟ್ಟುಕೊಳ್ಳದಂತೆ ಬುದ್ದಿ ಹೇಳಿದರು. 1 ನೇ ಆರೋಪಿಯು ಪೊ.ಠಾಣೆಯಲ್ಲಿ ತಾನು ಬೇರೆ ಮನೆ ಮಾಡಿದರೆ ಮೃತನೊಂದಿಗೆ ವಾಸ ಮಾಡುವುದಾಗಿ ಹೇಳಿದಳು. ಮೃತ ಉದಕುಮಾರ್ ಮತ್ತು ಚಾಸಾ 1 ರವರ ಮನೆಯ ಮಧ್ಯದಲ್ಲಿ ಗೋಡೆ ಕಟ್ಟಿ ಎರಡು ಭಾಗ ಮಾಡುವಂತೆ ತಿರ್ಮಾನವಾಯಿತು. ಆ ರೀತಿ ಗೋಡೆ ಕಟ್ಟಿದ ನಂತರವೂ 1 ನೇ ಆರೋಪಿ ಮೃತನ ಮನೆಗೆ ಬರಲಿಲ್ಲ. ಅದಾದ ನಂತರ ಮೃತನು ನೇಣು ಹಾಕಿಕೊಂಡಿದ್ದಾನೆ ಎಂದು ಸುದ್ದಿ ಬಂತು. ದಿಃ 08.03.2024 ರಲ್ಲಿ ಮೃತನು ನೇಣು ಹಾಕಿಕೊಂಡಿರುತ್ತಾನೆ. ಬೆಳಗ್ಗೆ 8.30 ಕ್ಕೆ ನನಗೆ ಈ ವಿಚಾರ ಗೊತ್ತಾಯಿತು. ರಾಮಾಪುರದ ಕಣಿವೆ ಆಂಜನೇಯ ದೇವಸ್ಥಾನದ ಆವರಣದಲ್ಲಿ ಬೇವಿನ ಮರಕ್ಕೆ ನೇಣು ಹಾಕಿಕೊಂಡಿದ್ದನು. ನಾನು ಸ್ಥಳಕ್ಕೆ ಹೋದಾಗ ಬೆಳಗ್ಗೆ 10.30 ಗಂಟೆ ಆಗಿತ್ತು. ಸ್ಥಳಕ್ಕೆ ಪೋಲೀಸರು ಬಂದರು. ಮೃತನ ಚಡ್ಡಿ ಜೇಬಿನಲ್ಲಿ ಒಂದು ಚೀಟಿ ಇತ್ತು. ಪೋಲೀಸರು ಅದನ್ನು ವಶಪಡಿಸಿಕೊಂಡರು. ಮೃತನು ಸದರಿ ಚೀಟಿಯಲ್ಲಿ ನನ್ನ ಸಾವಿಗೆ ಯಾರು ಹೇಗೆ ಕಾರಣ ಎಂಬ ವಿವರಗಳನ್ನು ಬರೆದಿದ್ದನು. ನನ್ನ ಸಾವಿಗೆ ಆರೋಪಿತರೇ ಕಾರಣ ಎಂದು ಮೃತನು ಚೀಟಿಯಲ್ಲಿ ಬರೆದಿದ್ದನು. ಸಾಕ್ಷಿ ಬರವಣಿಗೆ ಇದ್ದ ಚೀಟಿಯನ್ನು ಗುರುತಿಸಿದ್ದು, ಅದನ್ನು ನಿಪಿ 2 ಎಂದು ಈಗಾಗಲೇ ಗುರುತಿಸಲಾಗಿದೆ. ನಂತರ ಪೋಲೀಸರು ಮೃತನ ಶವವನ್ನು ಮರಣೋತ್ತರ

ಪರೀಕ್ಷೆಗೆಂದು ರವಾನಿಸಿದರು. ನಾನು ಚಾ.ನಗರ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಯಲ್ಲಿ ಚಾಸಾ 1, ಚಾಸಾ 5 ಮತ್ತು 8 ರವರು ಹಾಜರಿದ್ದರು. ಪೋಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ನಂತರ ಪೋಲೀಸರು ನನ್ನನ್ನು ವಿಚಾರಣೆ ಮಾಡಿದಾಗ ಹೇಳಿಕೆ ಕೊಟ್ಟಿರುತ್ತೇನೆ. ಚಾಸಾ 1 ಮೃತ ಉದಯಕುಮಾರ್ ಒಂದು ನೀವೇಶವನ್ನು ನನಗೆ ಮಾರಾಟ ಮಾಡಿರುತ್ತಾರೆ. ಸದರಿ ಹಣವನ್ನು 1 ನೇ ಆರೋಪಿಗೆ ಕೊಟ್ಟಿರುತ್ತಾರೆ. ಆದರೂ 1ನೇ ಆರೋಪಿ ಮೃತನೊಂದಿಗೆ ವಾಸ ಮಾಡಲು ಬರಲಿಲ್ಲ. ಸಾಕ್ಷಿ ಕ್ರಯದ ಕರಾರು ಪತ್ರವನ್ನು ಗುರುತಿಸಿದ್ದು, ಅದನ್ನು ನಿಪಿ 06 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 06(ಸಿ) ಎಂದು ಗುರುತಿಸಲಾಯಿತು. ಚಾಸಾ 1 ಮತ್ತು ಮೃತ ಉದಯಕುಮಾರ್ ತಮ್ಮ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ. ವಿಭಾಗ ಪತ್ರವನ್ನು ನಿಪಿ 05 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿಪಿ 05(ಸಿ) ಎಂದು ಗುರುತಿಸಲಾಯಿತು. ಚಾಸಾ 09 ರಿಂದ 11 ರವರು ನ್ಯಾಯ ಪಂಚಾಯಿತಿ ಮಾಡಿದಾಗ ಹಾಜರಿದ್ದರು. 1 ಮತ್ತು 4 ನೇ ಆರೋಪಿತರ ನಡುವೆ ಅಕ್ರಮ ಸಂಬಂಧ ಇದ್ದ ಕಾರಣ ಮೃತನು ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ.

**ಪಾಟೀ ಸವಾಲುಃ- ಶ್ರೀ ಸಿ.ಎಂ.ಜೆ ವಕೀಲರಿಂದ**

ನಾನು ಮತ್ತು ಮೃತ ಉದಯಕುಮಾರ್ ಸಂಬಂಧಿಕರು. ನಾನು ಮೃತನ ದೊಡ್ಡಪ್ಪನ ಮಗ. ನಾನು ಕುಣಗಳ್ಳಿ ಗ್ರಾಮದ ಮುಖ್ಯಸ್ಥ ಅಲ್ಲ ಎಂದರೆ ಸರಿಯಲ್ಲ. ಗ್ರಾಮದಲ್ಲಿ ಸುಮಾರು **10-15** ಜನ ಮುಖ್ಯಸ್ಥರು ಇರುತ್ತಾರೆ. ಕುಣಗಳ್ಳಿ ಗ್ರಾಮದ ನಿವಾಸಿಗಳಾದ ಬಸವಶೆಟ್ಟಿ, ಕಪ್ಪನ ಶೆಟ್ಟಿ, ವೆಂಕಟಶೆಟ್ಟಿ, ಮಾದೇವಶೆಟ್ಟಿ, ಶಂಭಿಸಿದ್ದಶೆಟ್ಟಿ, ಸಿದ್ದಪ್ಪಸ್ವಾಮಿ, ಸಿದ್ದಪ್ಪಸ್ವಾಮಿ, ಮಾದೇವಾ, ಸೋಮಣ್ಣ, ಮುದ್ದುರಾಮಶೆಟ್ಟಿ, ಸಿದ್ದೇಶ, ನಂಜಶೆಟ್ಟಿ, ವೆಂಕಟ್ ಶೆಟ್ಟಿ ಇವರು ಸಹಾ ಗ್ರಾಮದ ಮುಖ್ಯಸ್ಥರು ಎಂದರೆ ಸರಿ. ನಾವು ಬೇರೆ ಗ್ರಾಮಕ್ಕೆ ಹೋಗಿ ಪಂಚಾಯಿತಿ ಮಾಡಲು ಸದರಿ ಗ್ರಾಮಸ್ಥರಿಗೆ ತಿಳಿಸಬೇಕಾಗುತ್ತದೆ ಎಂದರೆ ಸರಿ. ನಮ್ಮಲ್ಲಿ ಗಡಿ ನ್ಯಾಯ ಎಂಬ ಪದ್ದತಿ ಇರುತ್ತದೆ ಎಂದರೆ ಸರಿ. ಸದರಿ ನ್ಯಾಯ ಪದ್ದತಿಯಲ್ಲಿ ತಿರ್ಮಾನ ಆದರೆ ಎಲ್ಲರೂ ಪಾಲಿಸಬೇಕಾಗುತ್ತದೆ.

ಪಂಚಾಯಿತಿ ತೀರ್ಮಾನಕ್ಕೆ ವಿರುದ್ಧವಾಗಿ ಯಾರು ನಡೆದುಕೊಳ್ಳುವಂತಿಲ್ಲ ಎಂದರೆ ಸರಿ. ಮೃತ ಉದಯಕುಮಾರ್ ಮತ್ತು 1ನೇ ಆರೋಪಿ ನಡುವೆ ಗಡಿ ನ್ಯಾಯ ಆಗಿರುವುದಿಲ್ಲ ಎಂದರೆ ಸರಿ. ಮೃತ ಉದಯಕುಮಾರ್, 1 ನೇ ಆರೊಪಿ ಮತ್ತು ಚಾಸಾ 1 ಒಟ್ಟಿಗೆ ಒಂದೇ ಮನೆಯಲ್ಲಿದ್ದಾಗಲೇ 1 ನೇ ಆರೋಪಿ ಗರ್ಭಿಣಿಯಾಗಿದ್ದಳು ಎಂದರೆ ಸರಿ. ಆಕೆ ಮಗುವಿನ ಜನನಕ್ಕೆಂದು ತನ್ನ ತಂದೆ ಮನೆಗೆ ಹೋಗುವವರೆಗೂ ಯಾವುದೇ ಗಲಾಟೆ ಆಗಿರಲಿಲ್ಲ. ವಿವಾಹವಾದ 9 ತಿಂಗಳಿಗೆ 1 ನೇ ಆರೋಪಿ ಮಗುವಿಗೆ ಜನನ ನೀಡಿರುತ್ತಾಳೆ ಎಂದರೆ ಸರಿ. ಮಗು ಜನಿಸಿದ ನಂತರ 1 ನೇ ಅರೋಪಿ ತನ್ನ ತಂದೆ ಮನೆಯಲ್ಲೇ ಇದ್ದಳು ಎಂದರೆ ಸರಿ. ಮಗು ಜನಿಸಿದಾಗ ನಾನು ಹೋಗಿರಲಿಲ್ಲ ಎಂದರೆ ಸರಿಯಲ್ಲ. ತೊಟ್ಟಿಲು ಶಾಸ್ತ್ರದ ಸಮಯದಲ್ಲಿ ಯಾವುದೇ ಗಲಾಟೆ ಇರಲಿಲ್ಲ.

ಮೃತನಿಗೆ ಮೊದಲಿನಿಂದಲೂ ಮದ್ಯಪಾನ ಮಾಡುವ ಚಟ ಇತ್ತು ಎಂದರೆ ಸರಿಯಲ್ಲ. ಮೃತನಿಗೆ ಜೂಜಾಡುವ ಅಭ್ಯಾಸ ಇತ್ತು ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು 1 ನೇ ಆರೋಪಿಗೆ ವಿವಾಹ ಸಮಯದಲ್ಲಿ ಚಿನ್ನಾಭರಣಗಳನ್ನು ನೀಡಿದ್ದರು ಎಂದರೆ ಸರಿಯಲ್ಲ. ಮೃತನು ಸದರಿ ಚಿನ್ನಾಭರಣಗಳನ್ನು ತನ್ನ ದುರಭ್ಯಾಸಕ್ಕೆ ಮಾರಾಟ ಮಾಡಿಕೊಂಡಿದ್ದನು ಎಂದರೆ ಸರಿಯಲ್ಲ. ಮೃತನು 1 ನೇ ಆರೋಪಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತನ ಕಿರುಕುಳದಿಂದ 1 ನೇ ಆರೋಪಿ ಮನೆ ಬಿಟ್ಟು ತನ್ನ ತಂದೆ ಮನೆಗೆ ಹೋಗಿದ್ದಳು ಎಂದರೆ ಸರಿಯಲ್ಲ. ತೊಟ್ಟಿಲು ಶಾಸ್ತ್ರ ಆದ 20 ದಿನಗಳಿಗೆ 1 ನೇ ಆರೋಪಿ ತನ್ನ ತಂದೆ ಮನೆಗೆ ಹೋದಳು. ನಂತರ 1 ನೇ ಆರೋಪಿ ಮೃತನ ಮನೆಗೆ ಬರಲಿಲ್ಲ. 1 ನೇ ಆರೋಪಿ ಮೃತನ ವಿರುದ್ಧ ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ಮೃತನು ಆಟೋ ಚಾಲನೆ ಮಾಡುತ್ತಿದ್ದನು. ಮೃತನು ಒಮ್ಮೊಮ್ಮೆ ಮನೆಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತನ ನಡವಳಿಕೆಯಿಂದ 1 ನೇ ಆರೋಪಿ ಆತನಿಂದ ದುರಾವಾಗಿದ್ದಳು ಎಂದರೆ ಸರಿಯಲ್ಲ. ಅಕ್ರಮ ಸಂಬಂಧ ವಿರುದ್ಧ ಪೋಲೀಸರಿಗೆ ದೂರು ಕೊಡುವಂತೆ ನಾನು ಮೃತನಿಗೆ ಹೇಳಿರುವುದಿಲ್ಲ.

ನನಗೆ 4 ನೇ ಆರೋಪಿಯ ಪರಿಚಯ ಇರುವುದಿಲ್ಲ. 1 ಮತ್ತು 4 ನೇ ಆರೋಪಿತರ ನಡುವೆ ಅಕ್ರಮ ಸಂಬಂಧ ಇರುವುದನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ದಾಸನದೊಡ್ಡಿ ದೊಡ್ಡ ಗ್ರಾಮವಾಗಿರುತ್ತದೆ. ಆರೋಪಿತರ ಮನೆಯ ಸುತ್ತ ಮುತ್ತ ಬೇರೆ ಮನೆಗಳು ಇರುತ್ತವೆ. 2 ಮತ್ತು 3 ಆರೋಪಿತರು ತಮ್ಮ ಇತರ ಮಕ್ಕಳೊಂದಿಗೆ ಒಟ್ಟಿಗೆ ವಾಸವಿರುತ್ತಾರೆ ಎಂದರೆ ಸರಿ. 2 ಮತ್ತು 3 ನೇ ಆರೋಪಿತರ ಕುಟುಂಬಕ್ಕೆ ಗ್ರಾಮದಲ್ಲಿ ಒಳ್ಳೆಯ ಹೆಸರು ಇದೆ ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 4 ನೇ ಆರೋಪಿತರು ಒಟ್ಟಿಗೆ ಇದ್ದಾರೆ ಎಂಬ ವಿಚಾರವನ್ನು ಮೃತನು ನನಗೆ ತಿಳಿಸಿದನು, ಎಂದು ನಾನು ಪೋಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮೃತನಿಗೆ ಹಲ್ಲೆ ಮಾಡಿದ್ದರು, ಎಂಬ ವಿಚಾರವನ್ನು ನಾನು ಪೋಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ಮೃತನು ತನಗೆ ಹಲ್ಲೆ ಮಾಡಿದ್ದಾರೆ ಎಂದು ಪೋಲೀಸರಿಗೆ ದೂರು ಕೊಟ್ಟಿರುವುದಿಲ್ಲ. ಪೋಲೀಸರು 1 ನೇ ಆರೋಪಿಗೆ ಅಕ್ರಮ ಸಂಬಂಧ ಇಟ್ಟುಕೊಳ್ಳಬೇಡ ಎಂದು ಬುದ್ದಿ ಹೇಳಿದ್ದರು ಎಂಬ ವಿಚಾರವನ್ನು ನಾನು ಹೇಳಿಕೆ ನೀಡುವಾಗ ಹೇಳಿಲ್ಲ ಎಂದರೆ ಸರಿಯಲ್ಲ. ನಾನು ನೀವೇಶವನ್ನು ಖರೀದಿಸಿ ಹಣವನ್ನು 1 ನೇ ಆರೋಪಿಗೆ ನೀಡಿದ್ದೇನೆ ಎಂದು ಪೋಲೀಸರ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೆ ಹಣ ನೀಡುವ ಸಲುವಾಗಿ ನೀವೇಶನ ಮಾರಾಟ ಮಾಡಲಾಗುತ್ತಿದೆ ಎಂದು ನಿಪಿ 6 ರಲ್ಲಿ ಬರೆದಿರುವುದಿಲ್ಲ. ನಿಪಿ 5 ಮತ್ತು 6 ದಾಖಲಾತಿಗಳನ್ನು ನಾವು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿಪಿ 2 ರ ಮೇಲೆ ಪೋಲೀಸರು ನನ್ನ ಸಹಿ ಪಡೆಯಲಿಲ್ಲ. ಮೃತ ಉದಯಕುಮಾರ್ ಮರಣಿಸುವ ಪೂರ್ವದಲ್ಲಿ ಸಾಮಾನ್ಯ ರೀತಿಯಲ್ಲಿ ಕೆಲಸ ಮಾಡುತ್ತಿದ್ದನು. ಮೃತನು ಊರಿನಿಂದ ಹೊರಗೆ ಹೋಗುವಾಗ ನನಗೆ ತಿಳಿಸಿರಲಿಲ್ಲ ಆತ ಯಾವ ದಿನಾಂಕದಂದು ಊರಿನಿಂದ ಹೊರಗೆ ಹೋದನು ಎಂದು ನನಗೆ ಗೊತ್ತಿಲ್ಲ. ಮೃತನು ಮೃತಪಡುವ ಹಿಂದಿನ ದಿನ ಚಾಸಾ 1 ಮತ್ತು 2 ರವರು ಆತನನ್ನು ಗ್ರಾಮದಲ್ಲಿ ಹುಡುಕುತ್ತಿದ್ದರು. ಮೃತನು ತಾನು ಮೃತಪಡುವುದಕ್ಕೆ ಎಷ್ಟು ದಿನಗಳಿಂದ ಹಿಂದೆ ಆಟೋ ಚಾಲನೆ ಮಾಡುವುದನ್ನು ನಿಲ್ಲಿಸಿದ್ದನು ಎಂದು ನನಗೆ ಗೊತ್ತಿಲ್ಲ.

ಮೃತನು ತುಂಬಾ ಕೈ ಸಾಲ ಮಾಡಿಕೊಂಡಿದ್ದನು ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಮೃತನು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಮೃತನು

ಮೃತಪಟ್ಟ ವಿಚಾರವನ್ನು ಆರೋಪಿತರ ಮನೆಗೆ ತಿಳಿಸಿರುವುದಿಲ್ಲ. ನಾನು ಪೊ.ಠಾಣೆಗೆ ಚಾಸಾ 1 ರವರ ಜೊತೆ ಹೋಗಿರುತ್ತೇನೆ. ಚಾಸಾ 1 ರವರಿಗೆ ಯಾವ ರೀತಿ ದೂರು ಕೊಡಬೇಕೆಂದು ನಾನು ಹೇಳಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮೃತನು ನೇಣು ಹಾಕಿಕೊಂಡಿದ್ದ ಸ್ಥಳದಲ್ಲಿ ಪೋಲೀಸರು ಬರುವುದಕ್ಕೆ ಮೊದಲು ನಮ್ಮ ಗ್ರಾಮಸ್ಥರು ಸೇರಿದ್ದರು ಎಂದರೆ ಸರಿ. ಆರೋಪಿತರಿಗೂ ಮೃತನ ಮರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾವು ಗ್ರಾಮಸ್ಥರು ಸೇರಿ ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿದ್ದೇವೆ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ